ಎಂದು ನಾನು ಕೇಳಿದ್ದೇನೆ. ಮೊನ್ನೆಯ ದಿವಸ ನಾನು ಹೋಗಿದ್ದಾಗ ಮಾನ್ಯ ಡಿ.ಆರ್. ಪಾಟೀಲ್ ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಏನಾದರೂ ಸಹಾಯ ಮಾಡಲಿಕ್ಕೆ ಆದರೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ :— ಪರಿಹಾರ ಕೊಡುವುದಾಗಿ ಈ ಸದನದೊಳಗೆ ಭರವಸೆ ಕೊಟ್ಟಿದ್ದಾರೆ. ಪರಿಶೀಲನೆಯಲ್ಲ. ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆ ಮತ್ತು ಅವರಿಗೆ ಏನಾದರೂ ಒಂದು ಶೌರ್ಯ ಪ್ರಶಸ್ತಿ ಕೊಡುತ್ತೇವೆಂದು ಇಲ್ಲಿ ಹೇಳಿದ್ದಾರೆ.

(ಖ) ಗೋದಾವರಿ ವ್ಯಾಲಿಯಲ್ಲಿ ಹೊಸ ಯೋಜನೆಗಳ ನಿರ್ಮಾಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಸನ್ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಗೆ ಸನ್ಮಾನ್ಯ ಮಂತ್ರಿಗಳು ಇಲ್ಲ. ಆದ್ದರಿಂದ ಬೇರೆ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು :— ಸರ್ಕಾರದ ಪರವಾಗಿ ಶೂನ್ಯ ವೇಳೆಯಲ್ಲಿ ಯಾರಾದರೂ ಉತ್ತರ ಕೊಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇದು ಬಹಳ ಗಂಭೀರವಾದಂತಹ ವಿಚಾರ ಇದೆ.

ಅಧ್ಯಕ್ಷರು :— ಎಷ್ಟು ಗಂಭೀರವಾದ ವಿಚಾರ ಇದೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸ್ಥಮೆಗೆ ಕೊಟ್ಟಂತಹ ಜಾಗದ ವಿಚಾರ. ಇದನ್ನು ಮೂರು ದಿವಸಗಳ ಹಿಂದೆ ಪ್ರಸ್ತಾಪ ಮಾಡಲು ಅವಕಾಶ ಕೋರಿದ್ದೇನೆ.

ಅಧ್ಯಕ್ಷರು :— ನೀವು ಪ್ರಸ್ತಾಪ ಮಾಡಿ. ನಿಮಗೆ ಎರಡು ಚಾನ್ಸ್. ಶ್ರೀರಾಮರೆಡ್ಡಿಗೆ ಒಂದು ಮಾರ್ಕಿಸ್ಟ್ ಪಾರ್ಟಿಗೆ ಇನ್ನೊಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೆ, 28ನೇ ತಾರೀಖು ಆಂಧ್ರದ ನೀರಾವರಿ ಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಮೆಮೋರ್ಯಾಂಡಮ್ ಅನ್ನು ಕೊಟ್ಟು ಗೋದಾವರಿ ವ್ಯಾಲಿಯಲ್ಲಿ ಹೊಸ ಯೋಜನೆಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಗೋದಾವರಿ, ಕೃಷ್ಣಾ ವ್ಯಾಲಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಗೋದಾವರಿ ಡೈವರ್ಷನ್‌ನಲ್ಲಿ ನಮಗೆ 26 ಟಿಎಂಸಿ ನೀರು ಬರಬೇಕಾಗಿರತಕ್ಕ ಕಾರಣಕ್ಕೋಸ್ಕರ ಈಗೇನು ಆಂಧ್ರ ಸರ್ಕಾರ ಪ್ರಧಾನ ಮಂತ್ರಿಗಳಿಗೆ ಮೆಮೋರ್ಯಾಂಡಮ್ ಕೊಟ್ಟಿದೆ. ಅದರಲ್ಲಿ ಎರಡು ಹೊಸ ಪ್ರಾಜೆಕ್ಟ್ ಮತ್ತು ಎರಡು ಹಳೆಯ ಪ್ರಾಜೆಕ್ಟ್ ನವೀಕರಣ ಮಾಡತಕ್ಕ ಪ್ರಶ್ನೆ ಇದೆ. ಮಾನ್ಯ ನೀರಾವರಿ ಸಚಿವರು ಅದರ ಬಗ್ಗೆ ಏನು ಹೇಳುತ್ತಾರೆ? ಸರ್ಕಾರ ಅದರ ಬಗ್ಗೆ ಒಂದು ನಿಲುವನ್ನು ಸ್ಪಷ್ಟ ಮಾಡಬೇಕು ಎಂದು ಹೇಳುತ್ತಿದ್ದೇನೆ. ಏಕೆಂದರೆ ಇದು ಬಹಳ ಗಂಭೀರವಾದಂತಹ ವಿಚಾರ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಗೋದಾವರಿಯಲ್ಲಿ ಎರಡು ಪಾರ್ಟ್ ಇದೆ. ಒಂದು ಪಾರ್ಟ್ ಅವಾರ್ಡ್‌ನೊಳಗೆ ಬಂದಿರತಕ್ಕ 22.3 ಟಿಎಂಸಿ ನೀರಿಗೆ ನಾವು ತಜಾಗಲೇ ಯೋಜನೆ ಹಾಕಿಕೊಂಡಿದ್ದೇವೆ. ಅದು ಕಾರಂಜಾ, ಚುಲುಕಿ ಮತ್ತು ಇತರ ಯೋಜನೆಗಳನ್ನು ನಾವು 22.3 ಟಿಎಂಸಿಗೆ ಹಾಕಿಕೊಂಡಿದ್ದೇವೆ. ಈಗ ಅವರು ಕೊಟ್ಟಿರತಕ್ಕದ್ದು ನಮಗೆ ಬಂದಿರುವ ಮಾಹಿತಿ ಪ್ರಕಾರ ಪೊಲ್ಲಾವರಂ ಡೈವರ್ಷನ್ ಎಂದು ಹೇಳಿ ಕೃಷ್ಣಾಕ್ಕೆ ಡೈವರ್ಟ್ ಮಾಡುತ್ತಾರೆ. ಅದರಲ್ಲಿ 83 ಟಿಎಂಸಿ ನೀರಿ ಪೊಲ್ಲಾವರಂ ಡೈವರ್ಷನ್‌ಗೆ ಇರತಕ್ಕದ್ದು. 80 ಟಿಎಂಸಿನಲ್ಲಿ 45 ಟಿಎಂಸಿ ಆಂಧ್ರಕ್ಕೆ 35 ಟಿಎಂಸಿನಲ್ಲಿ 22 ಟಿಎಂಸಿ ನೀರು ನಮಗೆ 14 ಟಿಎಂಸಿ ನೀರು ಮಹಾರಾಷ್ಟ್ರಕ್ಕೆ ಎಂದು ಇರತಕ್ಕದ್ದು. ರೀಜನರೇಟ್ ಸೇರಿಕೊಂಡರೆ 23 ಟಿಎಂಸಿ. ಆಗುತ್ತದೆ. ಸುಮಾರು ನಾವು ಕಳೆದ ಹತ್ತಾರು ಸಾರಿಯಿಂದ ಇದನ್ನು ಪ್ರೆಸ್ ಮಾಡುತ್ತಿದ್ದೇವೆ. ಪೊಲ್ಲಾವರಂ ಡೈವರ್ಷನ್‌ಗೆ ಅಪ್ರೂವಲ್ ಕೊಡಬೇಕು ಎಂದು ಹೇಳಿ ನಾನೂ ಕೂಡ ಈ ಸದನವನ್ನು ಉಪಯೋಗಿಸಿಕೊಂಡು ಪ್ರಧಾನ ಮಂತ್ರಿಯವರು ಈ ಪೊಲ್ಲಾವರಂ ಡೈವರ್ಷನ್ ನಿಂದ ಕೃಷ್ಣಾ ಪ್ರಾಜೆಕ್ಟ್‌ಗೆ ಕೂಡಲೇ ಕೇಂದ್ರ ಸರ್ಕಾರಿ ಅಪ್ರೂವಲ್ ಕೊಡಬೇಕು ಎಂದು ಹೇಳಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತಿದ್ದೇನೆ.

(ಛ) ಬೆಂಗಳೂರು ನಗರದಲ್ಲಿನ ಸ್ಲಮ್‌ನಲ್ಲಿ ಲಗ್ಗರೆ ಸರ್ವೆ ನಂ.9/1ರಲ್ಲಿ ಹತ್ತು ಎಕರೆ ಜಮೀನನ್ನು ಸ್ಲಮ್ ಬೋರ್ಡ್‌ನವರು ಬಡವರಿಗೆ ಗುಡಿಸಲು ಕಟ್ಟಲು ತೆಗೆದುಕೊಂಡಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಹೊರ ವಲಯದಲ್ಲಿರತಕ್ಕ ಸ್ಲಮ್‌ನಲ್ಲಿ ಲಗ್ಗರೆ ಸರ್ವೆ ನಂಬರ್ 9 : 1, ಹತ್ತು ಎಕರೆ ಜಮೀನನ್ನು ಸ್ಲಮ್ ಬೋರ್ಡ್‌ನವರು ಬಡವರಿಗೆ ಗುಡಿಸಲು ಕಟ್ಟಲು ತೆಗೆದುಕೊಂಡಿದ್ದರು. ಅದೇ ಜಾಗವನ್ನು ಸ್ಲಮ್ ಬೋರ್ಡ್‌ನಿಂದ ಸರ್ಕಾರ ವಾಪಸ್ ಪಡೆದು ಬೇರೆ ಯಾರಿಗೋ ಡೆವಲಪರ್ಸ್‌ಗೆ ಕೊಟ್ಟು ಅಲ್ಲಿ ಕಟ್ಟಡವನ್ನು ಕಟ್ಟಬೇಕು ಎಂದು ಹೇಳಿ ವಾಪಸ್ ಪಡೆದಿದೆ. ಅದರ ವಿರುದ್ಧ ಹಲವಾರು ಪ್ರತಿಭಟನೆಗಳು ಮತ್ತು ವಿವಾದಗಳು ಬಂದು 26-3-91 ರಂದು ವಿಧಾನ ಪರಿಷತ್ತಿನಲ್ಲಿ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಮಾನ್ಯ ಎಂ.ಸಿ. ನಾಣಯ್ಯನವರು ಸದರಿ ಜಮೀನನ್ನು ಸರ್ಕಾರ ವಾಪಸ್ ಪಡೆಯುವುದು ಎಂದು ಹೇಳಿದ್ದಾರೆ. ಆದರೆ ಆ ಆದೇಶವನ್ನು ಹಿಂತೆಗೆದುಕೊಳ್ಳಲಾಗುವುದು ಎಂದು ಹೇಳಿದ ನಂತರವೂ ಕೂಡ ಈಗ ಮತ್ತೆ ಅದೇ ಬಿಲ್ಡಿಂಗ್ ಎಕ್ಷೇಂಜ್ ಡೆವಲಪರ್ಸ್‌ಗೆ ಅದೇ ಸ್ಲಮ್ ಏರಿಯಾದಲ್ಲಿ ಕಟ್ಟಡ ಕಟ್ಟಲಿಕ್ಕೆ ಸರ್ಕಾರವೇ ಪರ್ಮಿಷನ್ ಆಗಿ ಇವತ್ತು ಕುಮ್ಮಕ್ಕು ಕೊಡುತ್ತಿದೆ. ಆದರಿಂದಾಗಿ ಆ ಸ್ಲಮ್‌ನಲ್ಲಿ ನೆಲೆಸಿರತಕ್ಕ ಹತ್ತಾರು ಸಾವಿರ ಜನ ಬಡವರು ಮುಂದಿ ಬಡವರು ಏನು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ, ಅವರನ್ನು ಅಲ್ಲಿಂದ ಖಾಲಿ ಮಾಡಿಸಬೇಕೆಂಬ ಒಂದು ಪ್ರಜ್ಞಾ ಪೂರ್ವಕವಾದಂತಹ ಪ್ರಯತ್ನ ನಡೆಯುತ್ತಿದೆ. ಮಾನ್ಯ ನಾಣಯ್ಯನವರು ಉತ್ತರ ಕೊಟ್ಟಮೇಲೆ ಕಟ್ಟಡ ಕಟ್ಟುತಕ್ಕ ಕೆಲಸ ಸ್ಥಗಿತ ಆಗಿತ್ತು. ಈಗ ಮತ್ತೆ ಒಂದು ವಾರದಿಂದ